# ಪರಿಸರ



ನಮ್ಮ ಸುತ್ತಮುತ್ತಲಿರುವ ಗಿಡ, ಮರ, ಬೆಟ್ಟ, ಗುಡ್ಡ, ಹಳ್ಳ, ಕೊಳ್ಳ, ಸಾಗರ, ಸಮುದ್ರ, ನದಿ,ಪರ್ವತ, ಕಲ್ಲು, ಮಣ್ಣು, ಗಾಳಿ,ಮಳೆ ಇವೆಲ್ಲವೂ ನಮ್ಮ ಪರಿಸರವಾಗಿದೆ.

ಪರಿಸರವು ಮನುಷ್ಯ, ಪ್ರಾಣಿ, ಪಕ್ಷಿ, ಜಲಚರಗಳು, ಕ್ರಿಮಿ ಕೀಟಗಳಿಗೆ ಆಶ್ರಯ ತಾಣವಾಗಿದೆ. ನಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿದ್ದರೆ ಮಾತ್ರ ನಾವು ಆರೋಗ್ಯವಂತರಾಗಿರಲು ಸಾಧ್ಯ. ಪರಿಸರ ಸಂರಕ್ಷಣೆ ನಮ್ಮ ನಿಮ್ಮೆಲ್ಲರ ಜವಾಬ್ದಾರಿ.

ಆಧುನಿಕತೆ, ನಾಗರೀಕರಣ, ಕೈಗಾರೀಕರಣ, ವಿಜ್ಞಾನ ಮತ್ತು ತಂತ್ರಜ್ಞಾನದ ಅತೀವ ಬೆಳವಣಿಗೆ ಇವೆಲ್ಲವೂ ಕೂಡ ಪರಿಸರ ನಾಶಕ್ಕೆ ಕಾರಣವಾಗುತ್ತಾ ಇದೆ. ಮನುಷ್ಯನ ಅತಿಯಾದ ಸುಖ ಜೀವನಕ್ಕೆ ಪರಿಸರ ನಾಶ ಮಾಡುತ್ತಿದ್ದಾನೆ. ಇದಕ್ಕೆ ಹೆಚ್ಚುತ್ತಿರುವ ಜನಸಂಖ್ಯೆಯೂ ಒಂದು ಕಾರಣವಾಗಿದೆ. ಹೀಗೆ ಮುಂದುವರಿದರೆ ಮನುಷ್ಯ ಈ ಭೂಮಿಯ ಮೇಲೆ ಬದುಕಲು ಅಸಾಧ್ಯ.

ಪ್ರತಿ ವರ್ಷ ಜೂನ್ 5ರಂದು ವಿಶ್ವ ಪರಿಸರ ದಿನ ಆಚರಿಸಲಾಗುತ್ತದೆ. ಪರಿಸರ ಉಳಿಸಲು ಹೆಚ್ಚೆಚ್ಚು ಪರಿಸರ ಜಾಗೃತಿ ಮೂಡಿಸಿ ಗಿಡಮರಗಳನ್ನು ಬೆಳೆಸಬೇಕು. ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ವಸ್ತುಗಳನ್ನು ಅಭ್ಯಾಸಗಳನ್ನು ವರ್ಜಿಸಬೇಕು.

ಪರಿಸರ ಉಳಿದರೆ ನಾಡು ಉಳಿಯುವುದು. ಪರಿಸರ ಉಳಿಸಿ ನಾಡು ಸಂರಕ್ಷಿಸಿ.

**– ರೊ। ವಸಂತ್ ಎಂ.**

## Happy Birthday

July 20 **Rtn. Uday Kotian**

July 21 **Rtn. Chandrashekar A. Hegde**

July 23 **Rtn. Ramnath Shenoy**






Stephanie A. Urchick
RI President



Rtn. CA Dev Anand
District Governor

SERVICE ABOVE SELF

# SERVICE

THE OFFICIAL HOUSE BULLETIN OF



Rtn. Iqbal Ahmed
President



Rtn. Ganesh Salian
Secretary

Rotary

THE MAGIC OF ROTARY

## ROTARY CLUB KARKALA

ZONE- 5, R.I. DIST.3182 Club No. 15726 Charter Date : 09-03-1964.

61 YEARS


Vice President :
**Rtn. Balakrishna Devadiga**
Mob : 9845838898

Immediate Past President :
**Rtn. John R. D'silva**
Mob : 9845015793

Joint Secretary :
**Rtn. Anthony Elias D'silva**
Mob : 9606813167

Treasurer :
**Rtn. Chethan Nayak**
Mob : 9880726811

Sargeant at arms :
**Rtn. Shreesha Bhat**
Mob : 9986795950

**DIRECTORS**

President Elect &
Club Service Director :
**Rtn. Naveen Shetty**
Mob : 9448254344

Vocational Service :
**Rtn. Shekar H.**
Mob : 9008031537

Community Service :
**Rtn. Soujanya Upadhyaya**
Mob : 9845356244

International Service :
**Rtn. Yogish Prabhu**
Mob : 9108749676

New Generation & Youth Service :
**Rtn. Harshini V. Shetty**
Mob : 9880644905

Chairman Club Membership
**Rtn. Sandeep Jain**
Mob : 9901894084

Chairman T.R.F.
**Rtn. Hariprakash Shetty**
Mob : 9632826562

Chairman Public Image
**Rtn. Madhukar Hegde**
Mob : 9972354497

Chairman Pulse Polio :
**Rtn. Dr. Jnanesh Kamath**
Mob : 9845212442

I.T. Website :
**Rtn. Venugopal P.S.**
Mob : 9902518746

District Project :
**Rtn. Vasanth M.**
Mob : 9449166492

Bulletin Editor :
**Rtn. Rekha Upadhyaya**
Mob : 9900213535

**WEEKLY EDITION** JULY 17, 2024 ISSUE - 3







ಕಾರ್ಕಳ ರೋಟರಿ ಸಂಸ್ಥೆಯ ಪ್ರಥಮ ವಾರದ ಸಭೆಯು ದಿನಾಂಕ 10–07–2024ರಂದು ರೋಟರಿ ಬಾಲಭವನದಲ್ಲಿ ನಡೆಯಿತು.

ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ರೊ। ಡಾ. ಭರತೇಶ ಆದಿರಾಜ್‌ರವರು ಕ್ಲಬ್ ಅಸೆಂಬ್ಲಿಯ ಬಗ್ಗೆ ಮಾಹಿತಿಯನ್ನು ನೀಡಿದರು. ರೊ। ಚೇತನ್ ನಾಯಕ್ ಅವರು ಬಜೆಟ್ ಮಂಡನೆ ಮಾಡಿರುತ್ತಾರೆ. (3ನೇ ಪುಟಕ್ಕೆ)

## *From the Editor's Desk..*



Dear friends in Rotary,

A brief article on History of Rotary will be shared in the magazine from time to time.

All contributions are welcome, Rotary information, Rotary quiz questions,and fun questions arranged in weekly meeting.

Rotary club karkala also has a long and distinguished history of service in the community

*Thank you.*

Your's in Rotary

**Rtn Rekha Upadhyaya**

## ROTARY INFORMATION




Rotary India Literacy Mission has a Comprehensive program for bringing total literacy in India

This Program is being implemented by the Rotary club and Rotarians Spread across the Country, Rotary in India through "Rotary India Literacy Mission"

This Program Called T-E-A-C-H
T- Teacher support
E- E learning
A- Adult Literacy
C- Child Development
H- Happy School



**(6ನೇ ಪುಟದಿಂದ)** ರಕ್ತದಾನದ ಬಗ್ಗೆ ಮಾಹಿತಿ ಕರಪತ್ರವನ್ನು ಬಿಡುಗಡೆಗೊಳಿಸಲಾಯಿತು.

ವೇದಿಕೆಯಲ್ಲಿ ಯುವವಾಹಿನಿ (ರಿ.) ಕಾರ್ಕಳ ಘಟಕದ ಅಧ್ಯಕ್ಷರಾದ ಶ್ರೀಮತಿ ಮಮತಾ ಅಂಚನ್, ರೋಟರಿ ಸಂಸ್ಥೆಯ ಸಮುದಾಯ ಸೇವೆಯ ನಿರ್ದೇಶಕರಾದ ರೊ। ಸೌಜನ್ಯ ಉಪಾಧ್ಯಾಯ, ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗದಳ ಸಾಮ್ರಾಟ್ ಘಟಕದ ಶ್ರೀ ಸುರೇಶ್ ಆಚಾರ್ಯ, ರೋಟರ್ಯಾಕ್ಟ್ ಅಧ್ಯಕ್ಷ ಸುನಿಲ್ ನಾಯಕ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ರಿ.) ಇದರ ಮೇಲ್ವಿಚಾರಕರಾದ ಶ್ರೀ ಜಯಾನಂದ, ಜನನಿ ಮಿತ್ರ ಮಂಡಳಿಯ ಅಧ್ಯಕ್ಷರಾದ ಶ್ರೀ ಸಂತೋಷ್ ಕುಲಾಲ್, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಶ್ರೀ ರಾಜೇಶ್ ಕುಲಾಲ್ ಉಪಸ್ಥಿತರಿದ್ದರು.

ಕಾರ್ಕಳ ರೋಟರಿ ಸಂಸ್ಥೆಯ ಕೋಶಾಧಿಕಾರಿ ರೊ। ಚೇತನ್ ನಾಯಕ್ ನಿರೂಪಣೆಯೊಂದಿಗೆ, ಕಾರ್ಯದರ್ಶಿ ರೊ। ಗಣೇಶ್ ಸಾಲಿಯಾನ್ ಇವರ ಧನ್ಯವಾದಗಳೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

## ... JOINING NEW MEMBERS ...
## 2024-25

Keertan P. Shenoy

Mamatha Shetty

Uday Kumar Kadamba

Rithesh

S.Parshwanath Varma

Mohammad Gouse

Subrahmanya

Novel John D'silva

# ಬೃಹತ್ ರಕ್ತದಾನ ಶಿಬಿರ











ರೋಟರಿ ಕ್ಲಬ್ ಕಾರ್ಕಳ, ಯುವವಾಹಿನಿ (ರಿ.) ಕಾರ್ಕಳ ಘಟಕ, ವಿಶ್ವ ಹಿಂದು ಪರಿಷತ್ ಹಾಗೂ ಭಜರಂಗದಳ ಸಾಮ್ರಾಟ್ ಘಟಕ ಕಲಂಬಾಡಿ ಪದವು, ರೋಟರ್‍ಯಾಕ್ಟ್ ಕ್ಲಬ್ ಕಾರ್ಕಳ, ಭಾರತೀಯ ರೆಡ್ ಕ್ರಾಸ್ ಸೊಸೈಟಿ ಕಾರ್ಕಳ ಘಟಕ, ಜನನಿ ಮಿತ್ರ ಮಂಡಳಿ (ರಿ.) ವಾಂಟ್ರಾಯಿ ಪದವು, ಹಳೆ ವಿದ್ಯಾರ್ಥಿ ಸಂಘ ಕಲಂಬಾಡಿ ಪದವು ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ರಿ.) ಕಾರ್ಕಳ ಕುಕ್ಕುಂದೂರು ಪದವು ಒಕ್ಕೂಟ ಇವರ ಜಂಟಿ ಆಶ್ರಯದಲ್ಲಿ ಜಿಲ್ಲಾ ರಕ್ತ ನಿಧಿ ಕೇಂದ್ರ ಜಿಲ್ಲಾ ಆಸ್ಪತ್ರೆ ಅಜ್ಜರಕಾಡು ಉಡುಪಿ ಇವರ ಸಹಯೋಗದೊಂದಿಗೆ ದಿನಾಂಕ 14-07-2024ನೇ ಆದಿತ್ಯವಾರ ಬೃಹತ್ ರಕ್ತದಾನ ಶಿಬಿರವು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಲಂಬಾಡಿ ಪದವು ಇಲ್ಲಿ ಜರುಗಿತು.

ಕಾರ್ಯಕ್ರಮವನ್ನು ಖ್ಯಾತ ವೈದ್ಯರಾಗಿರುವ ಭಾರತೀಯ ರೆಡ್ ಕ್ರಾಸ್ ಸೊಸೈಟಿ ಕಾರ್ಕಳ ಘಟಕದ ಅಧ್ಯಕ್ಷರಾಗಿರುವ ಡಾ। ರೊ। ಜೋಶಿ ಅವರು ದೀಪ ಬೆಳಗುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಪ್ರತಿಯೊಬ್ಬರು ಸ್ವಯಂಪ್ರೇರಿತ ರಕ್ತದಾನವನ್ನು ಮಾಡಿದರೆ ಒಂದು ಜೀವದಾನ ನೀಡಿದಂತೆ ಎಂದು ಶುಭಹಾರೈಸಿದರು.

ಕಾರ್ಕಳ ರೋಟರಿ ಸಂಸ್ಥೆಯ ಅಧ್ಯಕ್ಷರಾದ ರೊ। ಇಕ್ಬಾಲ್ ಅಹಮದ್ ಶುಭಹಾರೈಸಿದರು. ಜಿಲ್ಲಾ ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ। ವೀಣಾ ಅವರಿಂದ **(7ನೇ ಪುಟಕ್ಕೆ)**



# ಪ್ರಥಮ ವಾರದ ಸಭೆ



**(1ನೇ ಪುಟದಿಂದ)** ಕಾರ್ಕಳ ಸಂಸ್ಥೆಯ ಎಲ್ಲಾ ನಿರ್ದೇಶಕರುಗಳು ಒಂದು ವರ್ಷದ ಕಾರ್ಯಕ್ರಮದ ವಿವರವನ್ನು ನೀಡಿದರು ಹಾಗೂ ಸಂಸ್ಥೆಯ ಕ್ಲಬ್ ಪ್ರಾಜೆಕ್ಟ್ ಡೈರೆಕ್ಟರ್ ತಮ್ಮ ಒಂದು ವರ್ಷದ ಕಾರ್ಯಕ್ರಮದ ವಿವರವನ್ನು ನೀಡಿದರು.

ಪ್ಲಾಸ್ಟಿಕ್ ಪರ್ಯಾಯ ಬ್ಯಾಗನ್ನು ರೊ। ತುಕಾರಾಮ್ ನಾಯಕ್ ಮತ್ತು ರೊ। ಮೋಹನ್ ಶೆಣೈ ಎರ್ಮಾಳ್‌ರವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಸ್ವಚ್ಛತಾ ನಿರ್ದೇಶಕರಾದ ರೊ। ವಸಂತ ಎಂ. ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸುಮಾರು 100 ಬ್ಯಾಗನ್ನು ರೋಟರಿ ಸದಸ್ಯರಿಗೆ ಹಂಚಲಾಯಿತು. ವಿದ್ಯಾರ್ಜನೆಗಾಗಿ ಮಾನಸ ಶೆಟ್ಟಿಗಾರ್ ಇವರಿಗೆ ವಿದ್ಯಾರ್ಥಿವೇತನವನ್ನು ರೊ। ಡಾ. ಭರತೇಶ್ ಆದಿರಾಜ್ ಇವರು ನೀಡಿದರು. ರೋಟರಿ ಮಾಹಿತಿಯನ್ನು ಜ್ಯೋತಿ ಪದ್ಮನಾಭ ಇವರು ವಾಚಿಸಿದರು.

ಡೆಂಗ್ಯೂ ಕಾಯಿಲೆಯ ಮುಂಜಾಗ್ರತ ಕ್ರಮದ ಬಗ್ಗೆ ಕರಪತ್ರವನ್ನು ರೊ। ಡಾ. ಯಶೋಧರ ಎಂ., ರೊ। ಡಾ. ಜ್ಞಾನೇಶ್ ಕಾಮತ್, ರೊ। ಡಾ. ಆಶಾ ಪಿ. ಹೆಗ್ಡೆ ಬಿಡುಗಡೆಗೊಳಿಸಿದರು. ಬುಲೆಟಿನ್ ನಿರ್ದೇಶಕರಾದ ರೊ। ರೇಖಾ ಉಪಾಧ್ಯಾಯ ಇವರ ಇವರ ಮುಂದಾಳತ್ವದಲ್ಲಿ ತಯಾರಾದ ಸಂಸ್ಥಾಪತ್ರಿಕೆ ಯನ್ನು ರೊ। ಡಾ. ಭರತೇಶ ಆದಿರಾಜ್ ಇವರು ಬಿಡುಗಡೆಗೊಳಿಸಿದರು

ಈ ವಾರದ ಲಕ್ಕಿ ರೋಟರಿ ಸದಸ್ಯರಾಗಿ ರೊ। ಮಹಮದ್ ಗೌಸ್ ಇವರು ಆಯ್ಕೆಯಾಗಿರುತ್ತಾರೆ. ಈ ವಾರದ ಕ್ವಿಜ್ ಅನ್ನು ರೊ। ರೇಖಾ ಉಪಾಧ್ಯಾಯ ಇವರು ನಡೆಸಿಕೊಟ್ಟಿರುತ್ತಾರೆ. ರೊ। ಹರ್ಷಿಣಿ ವಿಜಯರಾಜ್, ರೊ। ಡಾ. ಆಶಾ ಪಿ. ಹೆಗ್ಡೆ, ರೊ। ಜಾನ್ ಡಿ'ಸಿಲ್ವ ಇವರು ಆಯ್ಕೆಯಾಗಿರುತ್ತಾರೆ.

ಇಂದಿನ ವಾರದ ಉಪಹಾರದ ಪ್ರಾಯೋಜಕರಾಗಿ ರೊ। ಹರಿಪ್ರಕಾಶ್ ಶೆಟ್ಟಿ ಮತ್ತು ರೊ। ವೃಂದ ಹರಿಪ್ರಕಾಶ್ ಶೆಟ್ಟಿ ಇವರಿಗೆ ಧನ್ಯವಾದಗಳು. ಕಾರ್ಯದರ್ಶಿ ರೊ। ಗಣೇಶ್ ಸಾಲಿಯಾನ್ ವಂದನಾರ್ಪಣೆಗೈದರು.

# ಬ್ಯಾಗ್ ಹಾಗೂ ಸಮವಸ್ತ್ರ ವಿತರಣೆ








ಕಾರ್ಕಳ ರೋಟರಿ ಸಂಸ್ಥೆ ವತಿಯಿಂದ ಸಾಣೂರು ಮದ್ದಣ್ಣ ನಗರ ಸರಕಾರಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ದಿನಾಂಕ 11-07-2024ರಂದು ಬ್ಯಾಗ್ ಹಾಗೂ ಸಮವಸ್ತ್ರ ವಿತರಣಾ ಕಾರ್ಯಕ್ರಮವು ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಾಣೂರು ಪಂಚಾಯತ್ ಅಧ್ಯಕ್ಷರಾದ ಯುವರಾಜ್ ಜೈನ್ ಇವರು ವಹಿಸಿಕೊಂಡು ವಿದ್ಯಾರ್ಥಿಗಳಿಗೆ ಬ್ಯಾಗ್ ಮತ್ತು ಸಮವಸ್ತ್ರವನ್ನು ವಿತರಣೆಯನ್ನು ನಡೆಸಿಕೊಟ್ಟರು.

ಆರೋಗ್ಯ ಸಹಾಯಕಿ ರೋಹಿಣಿ ಸಿಸ್ಟರ್ ಇವರು ಮಕ್ಕಳಿಗೆ ಡೆಂಗ್ಯೂ ರೋಗದ ಬಗ್ಗೆ ಮಾಹಿತಿಯನ್ನು ನೀಡಿದರು.

ಈ ಸಂದರ್ಭದಲ್ಲಿ ಪರಿಸರ ದಿನಾಚರಣೆಯ ಅಂಗವಾಗಿ ಶಾಲಾ ವಠಾರದಲ್ಲಿ ಗಿಡವನ್ನು ನೆಡುವ ಮೂಲಕ ಸಾಂಕೇತಿಕವಾಗಿ ಕಾರ್ಯಕ್ರಮವನ್ನು ಉದ್ಘಾಟನೆಗೊಳಿಸಲಾಯಿತು.

ಕಾರ್ಕಳ ರೋಟರಿ ಸಂಸ್ಥೆಯ ಅಧ್ಯಕ್ಷರಾದ ರೊ। ಇಕ್ಬಾಲ್ ಅಹಮದ್, ಕಾರ್ಯದರ್ಶಿ ರೊ। ಗಣೇಶ್ ಸಾಲಿಯನ್, ಕೋಶಾಧಿಕಾರಿ ರೊ। ಚೇತನ್ ನಾಯಕ್, ರೊ। ಸೌಜನ್ಯ ಉಪಾಧ್ಯಾಯ, ರೊ। ರೇಖಾ ಉಪಾಧ್ಯಾಯ, ರೊ। ಪ್ರಕಾಶ್ ಪಿಂಟೋ, ರೊ। ಬಾಲಕೃಷ್ಣ ದೇವಾಡಿಗ, ಶಿಕ್ಷಕರಾದ ರೊ। ವಸಂತ ಎಂ., ಶ್ರೀ ಪ್ರಭಾಕರ್, ಶ್ರೀಮತಿ ಅರುಣಿ, ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಸುಧೀರ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



# ಡೆಂಗ್ಯೂ ರೋಗದ ಬಗ್ಗೆ ಮಾಹಿತಿ ಕಾರ್ಯಕ್ರಮ



ರೋಟರಿ ಕ್ಲಬ್ ಕಾರ್ಕಳ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಇರ್ವತ್ತೂರು ಇವರ ಆಶ್ರಯದಲ್ಲಿ ದಿನಾಂಕ 12-07-2024ರಂದು ವರ್ಧಮಾನ್ ಪ್ರಾಥಮಿಕ ಶಾಲೆ ಸಾಣೂರಿನ ಶಾಲಾ ಮಕ್ಕಳಿಗೆ ಡೆಂಗ್ಯೂ ರೋಗದ ಬಗ್ಗೆ ಮಾಹಿತಿ ಮತ್ತು ಮುಂಜಾಗ್ರತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇರ್ವತ್ತೂರು ಇದರ ವೈದ್ಯಾಧಿಕಾರಿಗಳಾದ ಡಾ। ರೊ। ಯಶೋಧರ ಎಂ. ಇವರು ಮಾತನಾಡಿ ಬಯಲಿನಲ್ಲಿರುವ ತ್ಯಾಜ್ಯ ವಸ್ತುಗಳನ್ನು ಮಳೆ ನೀರು ಸಂಗ್ರಹವಾಗದಂತೆ ಎಚ್ಚರ ವಹಿಸುವುದು ಅಥವಾ ಸೂಕ್ತ ವಿಲೇವಾರಿ ಮಾಡುವುದು ಇದರಿಂದ ಸೊಳ್ಳೆ ನಿಯಂತ್ರಣ ಮಾಡಬಹುದು. ನೀರು ನಿಲ್ಲದಂತೆ ಎಚ್ಚರ ವಹಿಸಿ ಡೆಂಗ್ಯೂ ಜ್ವರದಿಂದ ಪಾರಾಗಿ ಎಂದು ಸವಿಸ್ತಾರವಾಗಿ ಮಕ್ಕಳಿಗೆ ಮಾಹಿತಿ ನೀಡಿದರು.

ಕಾರ್ಕಳ ರೋಟರಿ ಸಂಸ್ಥೆಯ ಅಧ್ಯಕ್ಷರಾದ ರೊ। ಇಕ್ಬಾಲ್ ಆಹಮದ್ ಇವರು ಮಕ್ಕಳ ಆರೋಗ್ಯದ ಬಗ್ಗೆ ಜಾಗೃತಿಯನ್ನು ವಹಿಸಿ ಎಂದು ಶುಭವನ್ನು ಕೋರಿದರು. ಶಿಕ್ಷಕರಾದ ರೊ। ವಸಂತ ಆರೋಗ್ಯವೇ ಭಾಗ್ಯ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಿ ಎಂದು ಮಕ್ಕಳಿಗೆ ಮನವರಿಕೆ ಮಾಡಿದರು.

ರೊ। ಬಾಲಕೃಷ್ಣ ದೇವಾಡಿಗ ಮತ್ತು ರೊ। ರೇಖಾ ಉಪಾಧ್ಯಾಯ ಶಾಲಾ ಸಂಚಾಲಕರಾದ ಕುಮಾರಯ್ಯ ಹೆಗ್ಡೆ ಕಾರ್ಯಕ್ರಮದಲ್ಲಿ ಚಿಕುನ್‌ಗುನ್ಯ ತಡೆಗಟ್ಟುವ ಮುಂಜಾಗ್ರತ ಕ್ರಮದ ಕರಪತ್ರವನ್ನು ಬಿಡುಗಡೆಗೊಳಿಸಿದರು.

ಶಾಲಾ ಸಂಚಾಲಕಿ ರೊ। ಶಶಿಕಲ ಹೆಗ್ಡೆ ಇವರು ಅತಿಥಿ ಗಣ್ಯರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ। ಗಣೇಶ್ ಸಾಲಿಯಾನ್ ಧನ್ಯವಾದ ಸಲ್ಲಿಸಿದರು.